ಕರ್ನಾಟಕ ಸರ್ಕಾರ

**ಆಡಳಿತ ತರಬೇತಿ ಸಂಸ್ಥೆ**

ಲಲಿತ ಮಹಲ್ ರಸ್ತೆ, ಮೈಸೂರು – 570 011

ದೂರವಾಣಿ: 0821–2522142, 2443264, 2443839, 2443261 ಫ್ಯಾಕ್ಸ್: 2523899

---

ಸಂಖ್ಯೆ: ತರಬೇತಿ(2)/ವಿವ.04/2014–15 ದಿನಾಂಕ: 07/01/2015

## ಸುತ್ತೋಲೆ

ವಿಷಯ: ನಾಡಕಚೇರಿಗಳಲ್ಲಿ ಆಧಾರ್ ಕಾರ್ಡ್ ವಿತರಿಸುವ ಸಿಬ್ಬಂದಿಯವರಿಗೆ ತರಬೇತಿಯನ್ನು ಜಿಲ್ಲಾ ತರಬೇತಿ ಸಂಸ್ಥೆಗಳಲ್ಲಿ ನೀಡುವ ಬಗ್ಗೆ.

ಉಲ್ಲೇಖ: (1) ನಿರ್ದೇಶಕರು, ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಂಇ/ಎಜೆಎಸ್‌ಕೆ/ಆಡಳಿತ.53/2013–14, ದಿನಾಂಕ: 20/12/2014.

(2) ಈ ಸಂಸ್ಥೆಯ ಸುತ್ತೋಲೆ ಸಂಖ್ಯೆ: ತರಬೇತಿ/ವಿವ.25/2014–15, ದಿನಾಂಕ 09/5/2014

ಉಲ್ಲೇಖಿತ ಪತ್ರದಲ್ಲಿ ಕೇಂದ್ರ ಸರ್ಕಾರದ ಯೋಜನೆಯಾದ "ಆಧಾರ್" ಕಾರ್ಡ್‌ಗಳನ್ನು ಪಡೆಯಲು ಸಾರ್ವಜನಕರಿಂದ ಅರ್ಜಿಗಳನ್ನು ನಾಡಕಛೇರಿಗಳಲ್ಲಿ ತಂತ್ರಾಂಶದ ಮೂಲಕ ಸ್ವೀಕರಿಸುವ ಬಗ್ಗೆ ನಾಡ ಕಛೇರಿ ಸಿಬ್ಬಂದಿಗಳಾದ ಉಪತಹಶೀಲ್ದಾರರು, ಆಪರೇಟರ್ ಹಾಗೂ ಮೀಸಲು ಆಪರೇಟರ್‌ಗಳಿಗೆ ತರಬೇತಿಯನ್ನು ಇ–ಆಡಳಿತ ಇಲಾಖೆಯಿಂದ ತರಬೇತಿ ಕಾರ್ಯಕ್ರಮಗಳನ್ನು ಜಿಲ್ಲಾ ತರಬೇತಿ ಸಂಸ್ಥೆಗಳಲ್ಲಿ ನೀಡಲು ಕೋರಲಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಜಿಲ್ಲಾ ತರಬೇತಿ ಸಂಸ್ಥೆಗಳಲ್ಲಿ ನಾಡಕಚೇರಿಗಳಲ್ಲಿ ಆಧಾರ್ ಕಾರ್ಡ್ ವಿತರಿಸುವ ಸಿಬ್ಬಂದಿಯವರಿಗೆ ಹಾಗೂ ಉಪತಹಶೀಲ್ದಾರ್‌ಗಳಿಗೆ ತರಬೇತಿ ನೀಡುವ ಸಲುವಾಗಿ; ಆಯಾ ಜಿಲ್ಲಾ ತರಬೇತಿ ಸಂಸ್ಥೆಗಳಲ್ಲಿ ಜನವರಿ 2015ನೇ ತಿಂಗಳುಗಳಿನಲ್ಲಿ ಕಂಪ್ಯೂಟರ್ ಸಭಾಂಗಣಗಳು ಖಾಲಿ ಇರುವ ದಿನಾಂಕಗಳನ್ನು ಗುರುತಿಸಿ; ಆ ದಿನಾಂಕಗಳನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಗೆ ಸಲ್ಲಿಸಿ; ಅವರ ಸಹಮತಿಯೊಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲು ಸೂಚಿಸಿದೆ.

ಈ ತರಬೇತಿ ಕಾರ್ಯಕ್ರಮಗಳಿಗೆ ತಗಲುವ ವೆಚ್ಚವನ್ನು ಉಲ್ಲೇಖಿತ ಸುತ್ತೋಲೆಯನ್ವಯ ಆಯಾ ಜಿಲ್ಲಾಧಿಕಾರಿಗಳಿಂದ ಪಡೆದು ನಿಯಮಾನುಸಾರ ಉಳಿತಾಯ ಖಾತೆಗೆ ಜಮೆ ಮಾಡಲು ಆದೇಶಿಸಿದೆ.

*ಕರಡು ಪ್ರತಿ ಮಹಾ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.*

7/1/15

ಜಂಟಿ ನಿರ್ದೇಶಕರು (ತರಬೇತಿ)
ಆಡಳಿತ ತರಬೇತಿ ಸಂಸ್ಥೆ, ಮೈಸೂರು

ಪ್ರತಿಯನ್ನು:–

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಜಿಲ್ಲಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
3. ಜಂಟಿ ನಿರ್ದೇಶಕರು (ತರಬೇತಿ), ಆಡಳಿತ ತರಬೇತಿ ಸಂಸ್ಥೆ, ಮೈಸೂರು
4. ಉಪ ನಿರ್ದೇಶಕರು (ಆಡಳಿತ), ಆಡಳಿತ ತರಬೇತಿ ಸಂಸ್ಥೆ, ಮೈಸೂರು
5. ಆ.ತ.ಸಂ. ವೆಬ್‌ಸೈಟ್ http://www.atimysore.gov.in ನಲ್ಲಿ ಪ್ರಕಟಿಸುವ ಸಲುವಾಗಿ ನೀಡಲಾಗಿದೆ.
6. ಆ.ತ.ಸಂಸ್ಥೆಯ ಪ್ರಕಟಣಾ ಫಲಕದಲ್ಲಿ ಅಳವಡಿಸುವ ಸಲುವಾಗಿ ನೀಡಲಾಗಿದೆ.
7. ಕಚೇರಿ ಪ್ರತಿ.